# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೬ ಸಿ<br>Part – 6 C | ಕಲಬುರಗಿ, ಮಂಗಳವಾರ, ೦೯, ಡಿಸೆಂಬರ್, ೨೦೨೫ (ಮಾರ್ಗಶಿರ, ೧೮, ಶಕವರ್ಷ, ೧೯೪7)<br>KALBURGI, TUESDAY, 09, DECEMBER, 2025 (MARGASHIRA , 18 , SHAKAVARSHA, 1947) | ನಂ. ೦೮<br>No. 08 |


## ಕರ್ನಾಟಕ ಸರ್ಕಾರ

**ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ ಜಿಲ್ಲೆ, ಬೀದರ**

**Office of the District Election Officer and Deputy Commissioner, Bidar District, Bidar-585401, Karnataka**

**Phone: 08482-225409 Fax: 08482-225262** **Email: deo.bidar@gmail.com**

ಸಂಖ್ಯೆ:ಕಂ/ಚುನಾ/ಸಿಆರ್- 143/2024-25 ದಿನಾಂಕ: 08-12-2025.

### :: ಅಧಿಸೂಚನೆ ::

ಸರ್ಕಾರದ ಅಧಿಸೂಚನೆ ಸಂ ನಅಇ 261 ಎಂಎಲ್ ಆರ್ 2022(e) ದಿನಾಂಕ: 15-04-2025 ರನ್ವಯ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್-3, 4, 500, 501 ಮತ್ತು 503 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, ಆಡಳಿತಾತ್ಮಕ ಹಿತದೃಷ್ಟಿಯಿಂದ ನಿರ್ದಿಷ್ಟಪಡಿಸಲಾದ ಬೀದರ್ ಜಿಲ್ಲೆಯ ಹಾಲಿ ಬೀದರ ನಗರಸಭೆಯೊಂದಿಗೆ 06 ಗ್ರಾಮ ಪಂಚಾಯಿತಿಗಳ 16 ಗ್ರಾಮಗಳನ್ನು ಸೇರಿಸಿ ದೊಡ್ಡ ನಗರ ಪ್ರದೇಶವೆಂದು ಘೋಷಿಸಲು ಹಾಗೂ ಸದರಿ ದೊಡ್ಡ ನಗರ ಪ್ರದೇಶವನ್ನು “ಬೀದರ ಮಹಾನಗರ ಪಾಲಿಕೆ” ಪ್ರದೇಶವೆಂದು ಪದನಾಮಿಕರಿಸಿ ಉದ್ಘೋಷಿಸಿರುತಾರೆ.

ಸರ್ಕಾರದ ಪೂರ್ವಾನುಮತಿಯನ್ವಯ ಈ ಕಾರ್ಯಾಲಯದ ಸಮ ಸಂಖ್ಯೆ ದಿನಾಂಕ: 04-11-2025 ರನ್ವಯ ಕರಡು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಕರಡು ಅಧಿಸೂಚನೆಯಿಂದ ಭಾದಿತರಾಗಬಹುದಾದ ಸಾರ್ವಜನಿಕರು ಸಲಹೆ ಮತ್ತು ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸದರಿ ಕರಡು ಅಧಿಸೂಚನೆ ಹೊರಡಿಸಿರುವ ದಿನಾಂಕದಿಂದ 30 ದಿವಸದ ಕಾಲ ಮಿತಿಯೋಳಗೆ ಸಲ್ಲಿಸುವಂತೆ ಅವಕಾಶ ಕಲ್ಪಿಸಲಾಗಿತ್ತು. ಸದರಿ ಅವಧಿಯೊಳಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಗಳ ಜನಸಂಖ್ಯೆ, ಭೌಗೋಳಿಕ ಸಾಮಿಪ್ಯ, ಮೂಲಭೂತ ಸೌಕರ್ಯ, ರಸ್ತೆ ಸಂಪರ್ಕ ಹಾಗೂ ಎಲ್ಲಾ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ. ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು ರವರ ಪತ್ರ ಸಂಖ್ಯೆ: ಗ್ರಾ.ಅ.ಪ. 448 ಜೆಪಿಎ 2025 ದಿನಾಂಕ: 11-09-2025 ರ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಮೂಲಕ ಸರ್ಕಾರವು ಅನುಮತಿಸಿದೆಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ ರಾಜ್ ಅಧಿನಿಯಮ, 1993 ರ ಪ್ರಕರಣ 4(1) ಮತ್ತು 4(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೀದರ ಜಿಲ್ಲೆಯ ಜಿಲ್ಲಾಧಿಕಾರಿಯಾದ **ಶಿಲ್ಪಾ ಶರ್ಮಾ ಭಾ.ಆ.ಸೇ**. ಎಂಬ ಹೆಸರಿನ ನಾನು, ಬೀದರ ಜಿಲ್ಲೆಯ ಈ ಕೇಳಕಂಡ ಕೊಷ್ಟಕದಲ್ಲಿ ವಿವರಿಸಲಾದಂತೆ ಕಾಲಂ ನಂ. (03)ರಲ್ಲಿನ ನೂತನ/ಪರಿಷ್ಕೃತ ಗ್ರಾಮ ಪಂಚಾಯತಿಗೆ ಕಾಲಂ ನಂ. (04) ರಲ್ಲಿನ ಗ್ರಾಮಗಳನ್ನು ಸೇರಿಸಿ, ಗ್ರಾಮ ಪಂಚಾಯತಿ ಕೇಂದ್ರ ಸ್ಥಾನವೆಂದು ರಚಿಸಲು ಉದ್ದೇಶಿಸಿ ಅಧಿಸೂಚನೆಯನ್ನು ಈ ಮೂಲಕ ಪ್ರಕಟಿಸಿದೆ ಹಾಗೂ ಬಾಗೆ ಕಾರಂಜಾ ಗ್ರಾಮವು ಬೀದರ ಮಹಾನಗರ ಪಾಲಿಕೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಸದರಿ ಗ್ರಾಮವನ್ನು ಕರಡು ಅಧಿಸೂಚನೆಯಲ್ಲಿ ಪ್ರಕಟಿಸಿದ ಮರಖಲ ಗ್ರಾಮ ಪಂಚಾಯತಿಯಿಂದ ಕೈಬಿಡಲಾಗಿದೆ. ಬಾಕಿ ಉಳಿದಂತೆ ಈ ಕೆಳಗಿನ ಕೋಷ್ಟಕದಲ್ಲಿ ದಾಖಲಾಗದ ಗ್ರಾಮ ಪಂಚಾಯತಿಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

| ಕ್ರ. ಸಂ. | ತಾಲ್ಲೂಕಿನ ಹೆಸರು | ನೂತನ / ಪರಿಷ್ಕೃತ ಗ್ರಾಮ ಪಂಚಾಯತಿಯ ವಿವರ | |
|---|---|---|---|
| | | ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿಯೆಂದು ಘೋಷಿಸಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹ |
| 1 | 2 | 3 | 4 |
| 1 | ಬೀದರ | ಅಷ್ಟೂರ | ಅಷ್ಟೂರ |
| | | | ಇಮಾಮಬಾದ |
| | | | ಗುಮ್ಮಾ |
| | | | |
| 2 | ಬೀದರ | ಗಾದಗಿ | ಗಾದಗಿ |
| | | | ಹಮಿಲಾಪೂರ |
| | | | ಸೋಲಪೂರ |
| | | | ಬಾವಾಪೂರ |
| | | | |
| 3 | ಬೀದರ | ಮರಖಲ | ಮರಖಲ |
| | | | ಬೆನಕನಳ್ಳಿ |
| | | | |
| 4 | ಬೀದರ | ಆಣದೂರ | ಅಣದೂರ |
| | | | ಸಿಕಿಂದ್ರಾಪೂರ |
| | | | ಖಾದರನಗರ |
| | | | ಬೇಳ್ಳೂರಾ |
| | | | ಬಕಚೌಡಿ |

**ಜಿಲ್ಲಾಧಿಕಾರಿ**
**ಬೀದರ ಜಿಲ್ಲೆ ಬೀದರ.**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಕಲಬುರಗಿ.

MADESHWARA NARASIMHA MURTHY JAYASIMHA
Digitally signed by MADESHWARA NARASIMHA MURTHY JAYASIMHA